# ಹಾಡೆಂಬುದು ನನ್ನಿಂದಲೇ ಜೀವ ತಳೆದ ಮಗಳ ಹಾಗೆ!

**ಪೂರ್ಣಚಂದ್ರ ತೇಜಸ್ವಿ**



ಒಂದು ಹಾಡು ಹುಟ್ಟುವುದು ಎನ್ನುವುದು ನನ್ನ ಮಟ್ಟಿಗೆ ಒಂದು ಜೀವಿಯ ಹುಟ್ಟಿನ ಹಾಗೆಯೇ. ನನಗೊಬ್ಬಳು ಮಗಳಿದ್ದಾಳೆ. ಅವಳು ಹುಟ್ಟಿದ್ದಾಳೆ; ಬೆಳೆಯುತ್ತಾಳೆ. ಎಷ್ಟೋ ವರ್ಷಗಳ ಕಾಲ ಜೀವನ ಸಾಗಿಸುತ್ತಾಳೆ. ಹೀಗೆ ಮಗಳು ಹುಟ್ಟಿ ಬೆಳೆಯುವುದು ನನ್ನ ಜೀವನದಲ್ಲಿ ಬಹುಮುಖ್ಯವಾದ ಘಟನೆ. ನನ್ನ ಮಗಳಿಗೆ ಐವತ್ತೋ ನೂರೋ ವರ್ಷ ಆಯಸ್ಸು. ಆದರೆ ನನ್ನಿಂದ ಹುಟ್ಟಿದ ಒಳ್ಳೆಯ ಹಾಡು ಎಷ್ಟು ನೂರು ವರ್ಷಗಳ ಬದುಕುತ್ತದೆಯೋ ನನಗೇ ಗೊತ್ತಿಲ್ಲ. ನನ್ನ ಹೆಸರನ್ನು ಸದಾಕಾಲ ಜೀವಂತವಾಗಿಡುವಂಥದ್ದು ಹಾಡು. ಟ್ಯೂನ್ ಹುಟ್ಟಿಕೊಂಡು, ನಂತರ ಒಂದೊಂದೇ ಇನ್‌ಸ್ಟ್ರುಮೆಂಟ್‌ಗಳು ಸೇರುತ್ತಾ, ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತ, ತಿದ್ದುತ್ತಾ ತೀಡುತ್ತಾ ಹಾಡು ರೂಪುಗೊಳ್ಳುವ ಪ್ರಕ್ರಿಯೆ ನನ್ನ ಬದುಕಿನಲ್ಲಿ ಮಗಳು ಹುಟ್ಟಿದಷ್ಟೇ ಮುಖ್ಯವಾದ ಘಟನೆ.

ಸಿನಿಮಾ ಸಂಗೀತದಲ್ಲಿ ಎಲ್ಲ ಹಾಡುಗಳನ್ನೂ ಅಷ್ಟೇ ಶ್ರದ್ಧೆಯಿಂದ, ಅಕ್ಕರೆಯಿಂದ ಮಾಡಲಾಗದು. ಇಲ್ಲಿನ ಒತ್ತಡಗಳೇ ಹಾಗಿರುತ್ತವೆ. ನಾನು ಸಿನಿಮಾ ಸಂಗೀತ ಎಂದು ಪ್ರತ್ಯೇಕವಾಗಿ ಹೇಳುವುದಕ್ಕಿಂತ ಒಂದು ಹಾಡು ಎಂದೇ ನೋಡುತ್ತೇನೆ. ಹಾಗೆ ನೋಡಿದಾಗ ನಾನು ಸಂಯೋಜಿಸುವ ಒಂದೊಂದು ಹಾಡೂ ನನಗೆ ಅಷ್ಟೇ ಮುಖ್ಯ; ಅದರ ಆಯಸ್ಸು ಆದಷ್ಟೂ ದೀರ್ಘವಾಗಿರಬೇಕು ಎಂದೇ ಪ್ರಯತ್ನಿಸುತ್ತೇನೆ. ಯಾಕೆಂದರೆ ಹಾಡಿಗೆ ಇರುವಂಥ ಅಗಾಧ ಜೀವಿತಾವಧಿ ಮತ್ತು ಪ್ರಭಾವ, ಅದು ಜನರಿಂದ ಎಷ್ಟು ಪ್ರೀತಿಸಿಕೊಳ್ಳಬಲ್ಲದು ಎಂಬುದನ್ನು ನೋಡಿಯೇ ನಾನು ಸಂಗೀತದತ್ತ ಆಕರ್ಷಿತನಾಗಿದ್ದು.

★★★

ಟ್ಯೂನ್ ಹುಟ್ಟುವುದಕ್ಕೆ ಹೀಗೆಯೇ ಅಂತ ಒಂದು ವಿಧಾನ, ಗಳಿಗೆ, ಪ್ರಕ್ರಿಯೆ ಇರುವುದಿಲ್ಲ. ಒಂದೊಂದು ಹಾಡು ಒಂದೊಂದು ರೀತಿಯಲ್ಲಿ ಹುಟ್ಟುತ್ತದೆ. ಕೆಲವೊಮ್ಮೆ ಟ್ಯೂನ್ ತಂತಾನೆಯೇ